**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀನಿವಾಸಪುರ**

**ಸಿಸಿ ಸಂಖ್ಯೆ:1605/2023** **CW**–7 **PW**–2

**ಸಾಕ್ಷಿಯನ್ನು ದಿಃ10.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಎಂ.ಡಿ ನಾರಾಯಣಪ್ಪ |
| ವಯಸ್ಸುಃ | 62 ವರ್ಷ |
| ವೃತ್ತಿಃ | ನಿವೃತ್ತ ಪೊಲೀಸ್ ಅಧಿಕಾರಿ |
| ವಾಸ ಸ್ಥಳಃ | ಕೋಲಾರ |

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ಅಕ್ಟೋಬರ್ 2022 ರಿಂದ ಜುಲೈ 2024 ರವರೆಗೆ ಶ್ರೀನಿವಾಸಪುರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ11.01.2023 ರಂದು ಆರ್ ಎಲ್ ಜಾಲಪ್ಪ ಆಸ್ಪತ್ರೆಯಿಂದ ತುರ್ತು ಕರೆ ಬಂದಿದ್ದು ನಾನು ನಮ್ಮ ಠಾಣೆಯ ಹೆಚ್ ಸಿ–19 ರವೀಂದ್ರರವರನ್ನು ಆಸ್ಪತ್ರೆಗೆ ಕಳುಹಿಸಿದ್ದೆ. ರವೀಂದ್ರರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆ ಆಶಾ(ಚಾಸಾ–1)ರವರ ದೂರನ್ನು ದಾಖಲಿಸಿಕೊಂಡು ಠಾಣೆಗೆ ಹಾಜರಾದ್ದರು. ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ಃ 6/2023 ರಲ್ಲಿ ಪ್ರಕರಣ ದಾಖಲಿಸಿದ್ದೆ. ನಿಪಿ–1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಬಿ) ಎಂದು ಗುರ್ತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ–3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರ್ತಿಸಲಾಯಿತು.

ದಿಃ17.01.2023 ರಂದು ಚಾಸಾ–1 ರವರು ತೋರಿಸಿದ ಸ್ಥಳ ಅಂದರೆ ಆರೋಪಿತರು ವಾಸವಿರುವ ಮನೆಯಲ್ಲಿ ಚಾಸಾ–5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 8 ರಿಂದ 9 ಗಂಟೆ ಸಮಯದಲ್ಲಿ ನಿಪಿ–2 ರಂತೆ ಪಂಚನಾಮೆ ಬರೆದಿದ್ದೆ. (ನಿಪಿ–2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರ್ತಿಸಲಾಯಿತು.)

ದಿಃ14.08.2023 ರಂದು ಚಾಸಾ-1 ರವರ ಮರು ಹೇಳಿಕೆ, ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೆ. ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಆತನನ್ನು ವಿಚಾರಣೆಗೊಳಪಡಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೆ. ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಮೇಲ್ನೋಟಕ್ಕೆ ಕಂಡು ಬಂದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಚಾಸಾ-1 ರವರಿಗೆ ಸಾಮಾನ್ಯವಾಗಿ ಹೊಟ್ಟೆ ನೋವು ಬರುತ್ತಿದ್ದ ಕಾರಣ ಅವರು ಆಸ್ಪತ್ರೆಗಾಗಿ ಹೋಗಿದ್ದರು ಎಂದರೆ ಸರಿ. ಚಾಸಾ-1 ಮತ್ತು ಆರೋಪಿಯ ನಡುವೆ ಕೇವಲ ಕೌಟುಂಬಿಕ ಸಮಸ್ಯೆಗಳಿದ್ದು ಅದರಲ್ಲಿ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ದೂರನ್ನು ಪಡೆದುಕೊಂಡು ಸುಳ್ಳು ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಠಾಣೆಯಲ್ಲೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 4 ರವರ ಹೇಳಿಕೆಗಳನ್ನು ಸಹಾ ದೂರಿಗೆ ಅನುಗುಣವಾಗಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶ್ರೀನಿವಾಸಪುರ**

**ಸಿಸಿ ಸಂಖ್ಯೆ:1605/2023** **CW-3** **PW-3**

**ಸಾಕ್ಷಿಯನ್ನು ದಿಃ10.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಸರೋಜಮ್ಮ |
| ಗಂಡನ ಹೆಸರುಃ | ಸಂಜೀವಪ್ಪ |
| ವಯಸ್ಸುಃ | 50 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಕಾನಗಮಾಕಲಹಳ್ಳಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ನನ್ನ ಅಳಿಯ. ಚಾಸಾ-1 ನನ್ನ ಮಗಳು. ಚಾಸಾ-1 ಮತ್ತು ಆರೋಪಿಯ ಮದುವೆಯು 11 ವರ್ಷಗಳ ಹಿಂದೆ ಆಗಿದ್ದು ಮೊದಲು 8 ವರ್ಷ ಆರೋಪಿ ಮತ್ತು ಚಾಸಾ-1 ರವರು ಸಹಜವಾಗಿ ಬಾಳ್ವೆ ಮಾಡುತ್ತಿದ್ದರು. ತದನಂತರ ಒಂದು ವರ್ಷದ ಕಾಲ ಆರೋಪಿಯು ದಿನ ಚಾಸಾ-1 ರವರಿಗೆ ವಿನಾಕಾರಣ ಜಗಳ ತೆಗೆಯುವುದು, ಗಲಾಟೆ ಮಾಡುವುದು, ಕೈಯಿಂದ ಹೊಡೆಯುವುದು ಮಾಡುತ್ತಿದ್ದರು. ಆರೋಪಿಯು ಬೇರೆ ಯಾವುದೋ ಮಹಿಳೆಯೊಂದಿಗೆ ಅಕ್ರಮವಾಗಿ ಸಂಬಂಧವಿಟ್ಟುಕೊಂಡಿದ್ದ ಕಾರಣ ಈ ರೀತಿ ಚಾಸಾ-1 ರವರಿಗೆ ಪೀಡಿಸುತ್ತಿದ್ದ. ಈ ವಿಷಯಗಳನ್ನೆಲ್ಲಾ ಚಾಸಾ-1 ರವರು ನನಗೆ ತಿಳಿಸುತ್ತಿದ್ದು ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ ಹಲವಾರು ಬಾರಿ ಆರೋಪಿಯ ಮನೆಗೆ ಹೋಗಿ ಆರೋಪಿಗೆ ಬುದ್ಧಿವಾದ ಹೇಳಿದ್ದೆವು. ಆದರೂ ಸಹಾ ಆರೋಪಿ ತಿದ್ದಿಕೊಳ್ಳದೇ ಅದೆ ರೀತಿ ಚಾಸಾ-1 ರವರೊಂದಿಗೆ ಜಗಳ ಮಾಡುತ್ತಿದ್ದರು. ಹೀಗಿರುವಾಗ ದಿನಾಂಕ ನೆನಪಿಲ್ಲ ಅದರೆ ಒಂದು ದಿನ ಸಂಜೆ ಸಮಯದಲ್ಲಿ ಆರೋಪಿಯು ಚಾಸಾ-1 ರವರೊಂದಿಗೆ ಗಲಾಟೆ ಮಾಡಿ ಅವರನ್ನು ಮನೆಯಿಂದ ಹೊರ ಹಾಕಿದ್ದು ಚಾಸಾ-1 ರವರನ್ನು ನಮ್ಮ ಮನೆಯ ಮುಂದೆ ಗೇಟ್ ಬಳಿ ಬಿಟ್ಟು ಹೊರಟು ಹೋಗಿದ್ದರು. ಇದಕ್ಕೆ ಮನನೊಂದು ಚಾಸಾ-1 ರವರು ವಿಷ ಸೇವನೆ ಮಾಡಿದ್ದರು. ಚಾಸಾ-1 ರವರನ್ನು ನಾವು ತುರ್ತಾಗಿ

ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿ ನ ಚಿಕಿತ್ಸೆಗಾಗಿ ಕೋಲಾರದ ಆರ್ ಎಲ್ ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

(ಸಹಾಯಕ ಸರ್ಕಾರಿ ಅಭಿಯೋಜಕರ ವಿನಂತಿ ಮೇರೆಗೆ ಸಾಕ್ಷಿದಾರರನ್ನು ಭಾಗಶಃ **ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲು ಮಾಡಲಾಯಿತು)

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ-1ರವರು ವಿಷ ಸೇವನೆ ಮಾಡಿಲ್ಲ ಹೊರತು ಹೊಟ್ಟೆ ನೋವಿಗಾಗಿ ಯಾವುದೋ ಅನಾಮಧೇಯ ಔಷದಿಯನ್ನು ಸೇವಿಸಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ "ದಿಃ10.01.2023 .......... ಮಾಡಿರುವುದಿಲ್ಲ " ಈ ರೀತಿ ಈಗ ನನಗೆ ಓದಿ ಹೇಳಿದ ಹಾಗೂ ಈಗ ಗುರ್ತಿಸಿದ ನಿಪಿ-4ರಂತೆ ಪೊಲೀಸರಿಗೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>**

ಆರೋಪಿಗೆ ವಯಸ್ಸಾದ ತಂದೆ ತಾಯಿ ಇದ್ದಾರೆ ಎಂದರೆ ಸರಿ. ಚಾಸಾ-1ರವರು ತನ್ನ ಅತ್ತೆ ಮಾವರವರನ್ನು ನೋಡಿಕೊಳ್ಳುವುದಿಲ್ಲವೆಂದು ಹೇಳಿ ಮತ್ತು ಶ್ರೀನಿವಾಸಪುರ ಟೌನಿನಲ್ಲಿಯೇ ವಾಸವಿರಬೇಕೆಂದು ಒತ್ತಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಯಾವ ಮಹಿಳೆಯೊಂದಿಗೆ ಆ ರೀತಿ ಅಕ್ರಮ ಸಂಬಂಧ ಇಟ್ಟು ಕೊಂಡಿದ್ದಾರೆಂದು ಹೇಳಲಾಗುವುದಿಲ್ಲ. ಆರೋಪಿ ಆ ರೀತಿ ಯಾವುದೇ ಅಕ್ರಮ ಸಂಬಂಧ ಇಟ್ಟು ಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರೇ ತನ್ನ ಇಚ್ಚೆಯಿಂದ ಆರೋಪಿಯೊಂದಿಗೆ ಗಲಾಟೆ ಮಾಡಿಕೊಂಡು ಆರೋಪಿಯ ಮನೆಯನ್ನು ಬಿಟ್ಟು ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-1ರವರು ತನ್ನ ಹೊಟ್ಟೆ ನೋವಿಗಾಗಿ ಯಾವುದೋ ಔಷದಿಯನ್ನು ಸೇವಿಸಿಕೊಂಡಿದ್ದ ಕಾರಣ ನಾವು ಆಸ್ಪತ್ರೆಗೆ ದಾಖಲಿಸಿದ್ದೆವು ಎಂದರೆ ಸರಿಯಲ್ಲ. ನಿಪಿ-4ರಂತೆ ನಾನು

ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಬೇಡಿಕೆಗೆ ಆರೋಪಿ ಒಪ್ಪಿ ಕೊಳ್ಳದ ಕಾರಣ ಚಾಸಾ-1 ರವರು ಆರೋಪಿಯ ವಿರುದ್ಧ ಈ ಸುಳ್ಳು ದೂರನ್ನು ದಾಖಲಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**